ಅಧಿಕಾರ ಏನು ಸದ್ಯಕ್ಕೆ ಇದೆ, ಅವನಿಗೆ ಕೊಡಬಹುದೆ? ಅಥವಾ Secretary ದ್ದು PDOs ಗೆ ಕೊಡಬಹುದೆ? ಅಥವಾ ಅವರಿಗೆ ಜಂಟಿಯಾಗಿ CEO ಪರವಾನಿಗೆಯಿಲ್ಲದೆ ಅಥವಾ ಮತ್ತೊಬ್ಬ ಇನ್ನು ಯಾರಾದರೂ ಅಧಿಕಾರಿ ಪರವಾನಿಗೆ ಇಲ್ಲದೆ ಮಾಡದೇ ಇರುವ ಹಾಗೆ ಕೆಲವು ಪಂಚಾಯಿತಿಗಳನ್ನು identify ಮಾಡಿ, ಅವುಗಳಲ್ಲಿ ವಿಶೇಷವಾಗಿ ಇರತಕ್ಕಂಥ ಒಂದು ನಿಯಮ ರೂಪಿಸಬೇಕೆಂದು ಸರ್ಕಾರ ಚಿಂತನೆ ಮಾಡುತ್ತದೆ.

ಶ್ರೀ ಪಿಳ್ಳ ಮುನಿಶಾಮಪ್ಪ: ಉಪಾಧ್ಯಕ್ಷರೆ, ಧನ್ಯವಾದಗಳು.

ಬಾರ್ ಮತ್ತು ವೈನ್‌ಶಾಪ್‌ಗಳಿಂದ ಕಾನೂನು ಉಲ್ಲಂಘನೆ

109(2149); ಶ್ರೀ ಅಖಂಡ ಶ್ರೀನಿವಾಸಮೂರ್ತಿ ಆರ್, (ಪುಲಿಕೇಶಿ ನಗರ)

ಅ) ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಪುಲಿಕೇಶಿನಗರ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಬಾರ್ ಅಂಡ್ ರೆಸ್ಟೋರೆಂಟ್‌ಗಳು ಮತ್ತು ವೈನ್ಸ್ ಶಾಪ್‌ಗಳ ಸಂಖ್ಯೆ ಎಷ್ಟು: (ಮಾಲೀಕತ್ವ ವಹಿಸಿರುವವರ ಹೆಸರು ಸಹಿತ ವಿವರ ನೀಡುವುದು):

ಆ) ಈ ವೈನ್ಸ್ ಶಾಪ್‌ಗಳು ಮತ್ತು ಬಾರ್‌ಗಳು ಮುಂಜಾನೆ ತೆರೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಇ) ಹಾಗಿದ್ದಲ್ಲಿ, ಮುಂಜಾನೆ ಬಾರ್ ಮತ್ತು ವೈನ್ಸ್ ಶಾಪ್‌ಗಳನ್ನು ತೆರೆಯಲು ಅನುಮತಿ ನೀಡಲಾಗಿದೆಯೇ:

ಈ) ಹಾಗಿಲ್ಲದಿದ್ದಲ್ಲಿ, ಕಾನೂನು ಉಲ್ಲಂಘಿಸಿದ ವೈನ್ಸ್ ಶಾಪ್ ಮತ್ತು ಬಾರ್‌ಗಳ ತಪಾಸಣೆ ನಡೆಸಿ ಪರವಾನಗಿಯನ್ನು ರದ್ದುಗೊಳಿಸಲಾಗುವುದೇ?

ಶ್ರೀ ಸತೀಶ್ ಲಕ್ಷ್ಮಣರಾವ್ ಜಾರಕಿಹೋಳಿ (ಅಬಕಾರಿ ಸಚಿವರು)

ಅ) ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಪುಲಿಕೇಶಿ ನಗರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಸಿಎಲ್–2 ಚಿಲ್ಲರೆ ಮದ್ಯದ

12 ಸನ್ನದುಗಳು ಮತ್ತು ಸಿವಿಲ್–9 ಬಾರ್ & ರೆಸ್ಟೋರೆಂಟ್ 11 ಸನ್ನದುಗಳು ಇರುತ್ತದೆ. ಸದರಿ ಸನ್ನದುಗಳನ್ನು ಹೊಂದಿರುವ ಮಾಲೀಕರ ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ.

ಆ) ಹೌದು.

ಇ) ಕರ್ನಾಟಕ ಅಬಕಾರಿ ಸನ್ನದುಗಳು (ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ 4ರನ್ವಯ ಚಿಲ್ಲರೆ ಮದ್ಯ ಮಾರಾಟ ಮತ್ತು ಬಾರ್ ಅಂಡ್ ರೆಸ್ಟೋರೆಂಟಗಳ ವ್ಯವಹಾರದ ವೇಳೆಯನ್ನು ನಿಗದಿಪಡಿಸಲಾಗಿರುತ್ತದೆ.

ಚಿಲ್ಲರೆ ಮದ್ಯ ಮಾರಾಟದ ಸನ್ನದುಗಳಿಗೆ (ಸಿಎಲ್–2) ಬೆಳಗ್ಗೆ 10 ರಿಂದ ರಾತ್ರಿ 10.30 ರ ವರೆಗೆ ಹಾಗೂ ಬಾರ್ & ರೆಸ್ಟೋರೆಂಟ್ ಸನ್ನದುಗಳಿಗೆ (ಸಿಎಲ್–9) ಬೆಳಗ್ಗೆ 10 ರಿಂದ ರಾತ್ರಿ 11.30 ರವರೆಗೆ ಹಾಗೂ ಶುಕ್ರವಾರ ಹಾಗೂ ಶನಿವಾರಗಳಂದು ಮಾತ್ರ ಬೆಳಗ್ಗೆ 10 ರಿಂದ ರಾತ್ರಿ 1 ರವರೆಗೆ ಸನ್ನದು ವ್ಯವಹಾರದ ವೇಳೆ ನಿಗಧಿಪಡಿಸಲಾಗಿರುತ್ತದೆ.

ಈ ಅವಧಿಯನ್ನು ಹೊರತುಪಡಿಸಿ ಮುಂಜಾನೆ ಹಾಗೂ ತಡ ರಾತ್ರಿಯ ನಂತರ ವ್ಯವಹಾರ ನಡೆಸಲು ಅನುಮತಿ ಇರುವುದಿಲ್ಲ.

ಈ) ನಿಯಮದಲ್ಲಿ ನಿಗಧಿಪಡಿಸಲಾಗಿರುವ ವೇಳೆಯನ್ನು ಉಲ್ಲಂಘಿಸಿ ವ್ಯಾಪಾರ ನಡೆಸುವುದು ಸನ್ನದು ಷರತ್ತು ಉಲ್ಲಂಘನೆಯಾಗಲಿದೆ. ಈ ರೀತಿಯ ಪ್ರಕರಣಗಳು ಕಂಡುಬಂದಲ್ಲಿ ಕರ್ನಾಟಕ ಅಬಕಾರಿ ಕಾಯ್ದೆಯ ಕಲಂ 36 ರ ಅನ್ವಯ ಸನ್ನದು ಷರತ್ತು ಉಲ್ಲಂಘನೆಗಾಗಿ ಸನ್ನದುದಾರರ ವಿರುದ್ಧ ಮೊಕದ್ದಮೆ ದಾಖಲಿಸಲಾಗುತ್ತದೆ. ನಂತರ, ನಿಯಮಾನುಸಾರ ದಂಡ ವಿಧಿಸಿ ಅಬಕಾರಿ ಇಲಾಖೆಯ ಮುಖಾಂತರ ಪ್ರಕರಣವನ್ನು ಇತ್ಯರ್ಥಪಡಿಸಲಾಗುತ್ತಿದ್ದು ಪರವಾನಗಿಯನ್ನು ರದ್ದುಗೊಳಿಸುವುದಿಲ್ಲ.

ಅನುಬಂಧ

ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಪುಲಿಕೇಶಿನಗರ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ಬೆಂಗಳೂರು ನಗರ ಜಿಲ್ಲೆ (ಪೂರ್ವ)ವಿಭಾಗದ ಫ್ರೇಜರ್‌ಟೌನ್ ವಲಯ ವ್ಯಾಪ್ತಿಯಲ್ಲಿ ಸ್ಪಷ್ಟದುಗಳ ವಿವರ.

ಕ್ರ.ಸಂ	ಸನ್ನದುದಾರರ ಹೆಸರು ಮತ್ತು ವಿಳಾಸ	ಸ್ಪಷ್ಟದು ವಿಧ
1	ಶ್ರೀ ಎನ್. ಮುರಳಿ, ಪಾರ್ವತಿ ವೈನ್ಸ್, ನಂ.36/105, ಜೈನ್ಸ್ ರಸ್ತೆ, ರಾಬರ್ಟ್‌ಸನ್ ಬಿಲ್ಡಿಂಗ್, ಫ್ರೇಜರ್‌ಟೌನ್, ಬೆಂಗಳೂರು	ಸಿಎಲ್-2
2	ಶ್ರೀ ವಿ. ಜಯಚಂದ್ರ ರೆಡ್ಡಿ, ಪ್ರಿಯಾ ವೈನ್ಸ್, ನಂ.13/1575/3, ಬಡಾಲನಗರ, ಸಗಾಯಿಪುರ, ಬೆಂಗಳೂರು	ಸಿಎಲ್-2
3	ಶ್ರೀ ಸಿ.ಎಸ್.ಜ್ಞಾನೇಶ್ವರರಾವ್, ಲಲಿತ ವೈನ್ಸ್, ನಂ 33, ಮೈಸೂರು ರಸ್ತೆ, ಫ್ರೇಜರ್ ಟೌನ್, ಬೆಂಗಳೂರು	ಸಿಎಲ್-2
4	ಶ್ರೀ ಕೆ. ಮಂಜುನಾಥ, ಸನಿಕ ವೈನ್ಸ್, ನಂ.203, ಆರೇಜಕ ಕಾಲೇಜು ಅಂಚೆ, ಬೆಂಗಳೂರು	ಸಿಎಲ್-2
5	ಸ್ಪೆನ್ಸರ್ಸ್ ರೀಟೈಲ್ ಲಿಮಿಟೆಡ್, ನಂ.3, ಮಸೀದಿ ರಸ್ತೆ, ಫ್ರೇಜರ್ ಟೌನ್, ಬೆಂಗಳೂರು	ಸಿಎಲ್-2
6	ಶ್ರೀ ಪಟ್.ಮಧಾಕರ್, ಕಮಲ್ ವೈನ್ಸ್, ನಂ.124, ಎಂ.ಎಂ.ರಸ್ತೆ, ಫ್ರೇಜರ್ ಟೌನ್, ಬೆಂಗಳೂರು	ಸಿಎಲ್-2
7	ಶ್ರೀಮತಿ ಪೆಟ್.ಎಂ.ವೈದೇಹಿ & ಶ್ರೀ ಪಟ್.ಎನ್.ಜಯರಾಮ್ ಪಾಲುದಾರರು, ನವಿತ ಪೇಷ್ಟು ಎಂಟರ್‌ಪ್ರೈಸಸ್, ನಂ 67/6, ಕೋರ್ಲ್ ರಸ್ತೆ, ಫ್ರೇಜರ್.ಟೌನ್, ಬೆಂಗಳೂರು	ಸಿಎಲ್-9
8	ಶ್ರೀ ವಿ.ಬಸವರಾಜು, ಮಂಜುನಾಥ ಬಾರ್ & ರೆಸ್ಟೋರೆಂಟ್, ನಂ.116, ಕಾಡುಗೊಂಡನಹಳ್ಳಿ, ಬೆಂಗಳೂರು	ಸಿಎಲ್-9
9	ಶ್ರೀಮತಿ ವಸಂತ, ಕೆಪೋರ್ ಬಾರ್ & ರೆಸ್ಟೋರೆಂಟ್, ನಂ.95, ಎಂ.ಎಂ.ರಸ್ತೆ, ಫ್ರೇಜರ್ ಟೌನ್, ಬೆಂಗಳೂರು	ಸಿಎಲ್-9
10	ಶ್ರೀ ಪಿ.ದೇವನ್, ಸಂಗೀತ ಬಾರ್ & ರೆಸ್ಟೋರೆಂಟ್, ನಂ 1567/ಎ, ಡಿ.ಜೆ.ಹಳ್ಳಿ ಮುಖ್ಯರಸ್ತೆ, ಡಿ.ಜೆ.ಹಳ್ಳಿ, ಬೆಂಗಳೂರು	ಸಿಎಲ್-9
11	ಮ್ಯಾನೇಜಿಂಗ್ ಪಾರ್ಟನರ್, ಆರಸಮ್ಮ ಮತ್ತು ಎನ್.ಮಾರುತಿ, ಮಮಮಂಜುನಾಥ ಬಾರ್ ಅಂಡ್ ರೆಸ್ಟೋರೆಂಟ್, ನಂ. 60/1, ಗ್ರೌಂಡ್ ಫ್ಲೋರ್ ಮತ್ತು ಒಂದನೇ ಮಹಡಿ, ಕೋರ್ಲ್ ರಸ್ತೆ ಐ.ಸಿ.ಐ.ಸಿ.ಐ.ಬ್ಯಾಂಕ್ ಎದುರು ಫ್ರೇಜರ್‌ಟೌನ್, ಬೆಂಗಳೂರು.	ಸಿಎಲ್-9
12	ಶ್ರೀ ಸಿ ಆಂಥೋನಿ ಪಾಲ್, ಸೂದ್ ಅಸೋಸಿಯೇಟ್ಸ್ ನಂ 41, ಶಾಪ್ ನಂ 4 & 5, ಎಂ.ಎಂ ರಸ್ತೆ, ಬೆಂಗಳೂರು	ಸಿಎಲ್-9

ಬೆಂಗಳೂರು-ಮಹಾನಗರ ಪಾಲಿಕೆ ವ್ಯಾಪ್ತಿಯ ಪುಲಿಕೇಶಿನಗರ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ಬೆಂಗಳೂರು ನಗರ ಜಿಲ್ಲೆ (ಪೂರ್ವ) ವಿಭಾಗದ ಮಾಗೆರೆಡ್ಡಿಪಾಳ್ಯ ವಲಯ ವ್ಯಾಪ್ತಿಯಲ್ಲಿ ಸ್ಪಷ್ಟದುಗಳ ವಿವರ.

ಕ್ರ.ಸಂ	ಸನ್ನದುದಾರರ ಹೆಸರು ಮತ್ತು ವಿಳಾಸ	ಸ್ಪಷ್ಟದು ವಿಧ
1	ಶ್ರೀ ಆರ್. ಮುರುಳಿ, ನಂ. 839, ಕೆಹೆಚ್‌ಎಂ ಮುಖ್ಯ ರಸ್ತೆ, ಕಾವೇರಿ ನಗರ, ಬೆಂಗಳೂರು	ಸಿಎಲ್-2
2	ಶ್ರೀ ಟಿ.ಎಂ ಭೀಮಯ್ಯ ನಂ. 3, ಡಿ.ಜೆ ಹಳ್ಳಿ ಮುಖ್ಯರಸ್ತೆ, ಬೆಂಗಳೂರು.	ಸಿಎಲ್-2
3	ಶ್ರೀ.ಎಂ.ಎಸ್.ರಾಮಪ್ಪ ನಂ. 1(28), ಡಿ.ಜೆ-ಹಳ್ಳಿ ಮುಖ್ಯರಸ್ತೆ, ಬೆಂಗಳೂರು.	ಸಿಎಲ್-2
4	ಶ್ರೀ ಟಿ.ವಿ ಮುನೇಗೌಡ, ನಂ.1184, ಶ್ಯಾಂಪುರ ರಸ್ತೆ, ಬೆಂಗಳೂರು	ಸಿಎಲ್-2
5	ಶ್ರೀ ಸಿ.ಕೆ ಗೋಪಿನಾಥ್, ನಂ.1104, ಶ್ಯಾಂಪುರ ರಸ್ತೆ, ಬೆಂಗಳೂರು	ಸಿಎಲ್-2
6	ಶ್ರೀ ವಿ ಶ್ರೀನಿವಾಸ ಮೂರ್ತಿ, ನಂ 691, ಬಿ ಎಸ್.ಟಿ ಕಾಲೋನಿ, ಕಾವಲಭೈರಸಂದ್ರ, ಬೆಂಗಳೂರು	ಸಿಎಲ್-2
7	ಶ್ರೀ ವಿ. ಪಾರ್ಥಿಬನ್, ನಂ.710, ಬಿ.ಎಸ್.ಎ ರಸ್ತೆ, ಟ್ಯಾನರಿ ರಸ್ತೆ, ಬೆಂಗಳೂರು.	ಸಿಎಲ್-9
8	ಶ್ರೀ ವಿ.ಚಂದ್ರಶೇಖರ್, ನಂ 19, ಎಸ್.ಕೆ ಗಾರ್ಡನ್, 1ನೇ ಮುಖ್ಯರಸ್ತೆ, ಬೆಂಗಳೂರು.	ಸಿಎಲ್-9
9	ಶ್ರೀ ನವೀನ ಚಂದ್ರ, ನಂ.1&2, ಕಾವಲಭೈರಸಂದ್ರ ಬೆಂಗಳೂರು	ಸಿಎಲ್-9
10	ಶ್ರೀ ಡಿ.ಶಂಕರಪ್ಪ, ನಂ.1109, ಕಾವಲಭೈರಸಂದ್ರ ಬೆಂಗಳೂರು.	ಸಿಎಲ್-9
11	ಶ್ರೀ ಆರ್. ನವನೀತ್, ನಂ.1-3, ಸೈಟ್ ನಂ.10, ಎಸ್.ವಿ ಕಾಂಪ್ಲೆಕ್ಸ್, ದಿನ್ನೂರು ಮುಖ್ಯರಸ್ತೆ, ಬೆಂಗಳೂರು.	ಸಿಎಲ್-9

FD 21 EL 9 15

ವೆಂಕಟೇಶ್ ಜೆ.
ಸಹಾಯಕ ಆಯುಕ್ತರು
ಅಧಿಕೃತ ಪ್ರಾಧಿಕಾರಿ (ಅಬಕಾರಿ)

ಶ್ರೀ ಹೆಚ್.ಕೆ. ಪಾಟೀಲ್: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಅಬಕಾರಿ ಸಚಿವರ ಪರವಾಗಿ ಉತ್ತರಿಸಲು ಅನುಮತಿ ಕೊಡಬೇಕು.

ಶ್ರೀ ಅಖಂಡ ಶ್ರೀನಿವಾಸಮೂರ್ತಿ ಆರ್.: ನನ್ನ ಮತ ಕ್ಷೇತ್ರವಾದ ಪುಲಕೇಶಿನಗರ ವಿಧಾನಸಭಾ ಕ್ಷೇತ್ರದಲ್ಲಿ ಬೆಳಗಿನ ಜಾವ 5 ಗಂಟೆಗೆ wine stores and bars ಅನ್ನು ತೆರೆದು ಅಲ್ಲಿ ವ್ಯಾಪಾರ ಮಾಡುತ್ತಾರೆ. ಸುಮಾರು 60 ರಿಂದ 70% ಕೂಲಿಕಾರ್ಮಿಕರಿದ್ದು, ಅಲ್ಲಿ ಬೆಳಗಿನ ಜಾವ ವ್ಯಾಪಾರ ಮಾಡುವುದರಿಂದ ಅವರು ಕೂಲಿ ಕೆಲಸಕ್ಕೆ ಹೋಗದೆ ಕುಡಿದು ಅಲ್ಲಿಯೇ ಬಿದ್ದಿರುತ್ತಾರೆ. ಮಾನ್ಯ ಅಬಕಾರಿ ಸಚಿವರಲ್ಲಿ ಅವರ ಬಗ್ಗೆ ಏನು ಕ್ರಮ ಕೈಗೊಳ್ಳುತ್ತೀರಿ ಹಾಗೂ ಆ ಅಂಗಡಿಗಳ ಬಗ್ಗೆ ಹೆಚ್ಚಿನ ಕ್ರಮ ಕೈಗೊಳ್ಳಬೇಕೆಂದು ಕೇಳಿದಾಗ ಅವರು ನನ್ನ ಪ್ರಶ್ನೆಗೆ, ಅಂಗಡಿಗಳ ಮೇಲೆ ದಂಡ ವಿಧಿಸುತ್ತೇವೆ ಎನ್ನುತ್ತಾರೆ. ದಂಡ ವಿಧಿಸುವ ಬದಲು ಆ ಅಂಗಡಿಗಳನ್ನು ರದ್ದುಪಡಿಸಬೇಕು. ಅಲ್ಲಿಯ ಅಧಿಕಾರಿಗಳು ಯಾರಿದ್ದಾರೆ, Inspector ದ್ದು ನಮ್ಮಲ್ಲಿ ಎರಡು range ಬರುತ್ತವೆ. ಆ ಎರಡು range ಗಳಲ್ಲಿ ಮುನಿರೆಡ್ಡಿಪಾಳ್ಯ ರೇಂಜ್ ಒಂದು ಹಾಗೂ ಪುಲಿಕೇಶಿನಗರ ರೇಂಜ್ ಒಂದು. Inspector ಅನ್ನು ಕರೆದು ಕೇಳಿದರೆ ಒಬ್ಬರು ಬರುತ್ತಾರೆ, ಒಬ್ಬರು ಬರುವುದಿಲ್ಲ. ಅವರು, ನಾನು ಈ ಜಾಗಕ್ಕೆ ಒಂದು ಎರಡೂವರೆ ತಿಂಗಳಾಗಿದೆ ಎನ್ನುತ್ತಾರೆ. ದಯವಿಟ್ಟು ಅಂಥ ಅಧಿಕಾರಿಗಳನ್ನು ಅಲ್ಲಿಂದ ತೆಗೆದು, immediate suspend ಆದರೂ ಮಾಡಬೇಕು ಇಲ್ಲವೇ ನಮ್ಮ ಕ್ಷೇತ್ರದಲ್ಲಿರುವ wine store and bar ಗಳನ್ನು ರದ್ದುಪಡಿಸಬೇಕೆಂದು ಮನವಿ ಮಾಡುತ್ತೇನೆ. ಆ Inspector ಗಳನ್ನು ಹಾಗೂ ಅಲ್ಲಿನ ಅಧಿಕಾರಿಗಳನ್ನು . . . . .

ಶ್ರೀ ಎಸ್. ಸುರೇಶ್‌ಕುಮಾರ್: ಅದು ಪುಲಿಕೇಶಿನಗರದ್ದು ಮಾತ್ರ ಸಮಸ್ಯೆಯಲ್ಲ. ಇಡೀ ರಾಜ್ಯದಲ್ಲಿ ವಿಶೇಷವಾಗಿ ಎಲ್ಲಾ ಕಡೆ ಇದೆ. ಬೆಳಗ್ಗೆ ಹೋಟೆಲ್ ತೆಗೆಯುವುದಕ್ಕಿಂತ ಮುಂಚೆ wine stores ತೆರೆದಿರುತ್ತಾರೆ. Bar ತೆರೆದಿರುತ್ತಾರೆ. ಆ ಜನರು ಬೆಳಗ್ಗೆ 6–00, 6.30ಗೆ ಹೋಗಿ ಕುಡಿಯುತ್ತಾರೆ. ಇಲಾಖೆಯವರು ಇದು ಗೊತ್ತಿದ್ದೂ ಗೊತ್ತಿದ್ದೂ ಏಕೆ ಕಣ್ಣುಮುಚ್ಚಿ ಕುಳಿತಿದ್ದಾರೆ? ಜನರ ಆರೋಗ್ಯ ಇನ್ನಷ್ಟು ಕೆಡಬೇಕೇ? ಬೆಳಗ್ಗೆ 5–30, 6–00

ಗಂಟೆಗೆ wine stores ಮುಂದೆ ಇರುತ್ತಾರೆ. ಇದು ಯಾರದಾದರೂ ಆಡಳಿತಕ್ಕೆ ಶೋಭೆ ತರುತ್ತದೆಯೇ? ದಯವಿಟ್ಟು, ದಂಡ ವಿಧಿಸಿ ಅವರನ್ನು ಇದು ಮಾಡುತ್ತೇವೆ ಎನ್ನುವುದನ್ನು ಬಿಟ್ಟು ಪರವಾನಿಗೆ ರದ್ದುಮಾಡುವುದಕ್ಕೆ ಕ್ರಮ ಕೈಗೊಳ್ಳಿ. Working hours ಇದ್ದರೆ, ಆ working hours ನಲ್ಲಿ ಮಾರಬೇಕು. 6 to 6 ಎಂದರೇನರ್ಥ? 6 AM to 6 AM ಎಂದೇ?

ಶ್ರೀ ಎನ್.ಎ. ಹ್ಯಾರಿಸ್: ಅದು ಕಾನೂನು ಬಾಹಿರ ಎಂದು ಮಾಡುತ್ತಿರುವುದು. Actually, 6 ಗಂಟೆಗೆ iillegal ಆಗಿ opem ಮಾಡುತ್ತಾರೆ. ಅದು ಎಲ್ಲಾ ಕಡೆ ಇದೆ.

ಶ್ರೀ ಅಖಂಡ ಶ್ರೀನಿವಾಸಮೂರ್ತಿ ಆರ್: ನಮ್ಮ ಕಡೆ 5 ಗಂಟೆಗೇ ತೆರೆಯುತ್ತಾರೆ.

ಶ್ರೀ ಎಸ್. ಸುರೇಶ್‌ಕುಮಾರ್: ಇದೂ ಇಡೀ ನಗರದ ಸಮಸ್ಯೆ.

(ಗೊಂದಲ)

ಉಪಾಧ್ಯಕ್ಷರು: ಮಂತ್ರಿಗಳು ಹೇಳಲಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಅದಕ್ಕೆ ಕಾರಣ ಎಂದರೆ, ನೀವು ಇಷ್ಟು ಮಾರಲೇ ಬೇಕೆಂದು sales target ಕೊಟ್ಟಿದ್ದೀರಿ. ನೀವೂ ಇಷ್ಟು ಮಾರಲೇಬೇಕೆಂದು ಕಡ್ಡಾಯಗೊಳಿಸಿದರೆ, ಅವನು ಅಷ್ಟು ಮಾರಲಿಕ್ಕೆ ಬೆಳಗ್ಗೆಯೇ ತೆರೆಯಬೇಕು. ಇಲ್ಲವೆಂದೆ, ಅದು ಮಾರಾಟವಾಗುವುದಿಲ್ಲ. ಇಲ್ಲವೆಂದರೆ ನನಗೆ notice ಕೊಡುತ್ತಾರೆ ಎಂದು ಅಧಿಕಾರಿಗಳು ಹೇಳುತ್ತಾರೆ. ನೀವು sales target ಕೊಟ್ಟಿರುವುದರ ಬಗ್ಗೆ ನೀವು ಬಿಗುವಾಗದೇ ಹೋದರೆ ನೀವು ಈ timing ಅನ್ನೂ ಬಿಗು ಮಾಡಿಸಬಹುದು.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ: ಇವರು ಕೇಳುವ ಪ್ರಶ್ನೆಗೆ ನೀವು ಹೇಳುವ ಉತ್ತರಕ್ಕೇ ನಮ್ಮದು objection ಇದೆ. ಅವರು ಕೇಳಿರುವ ಪ್ರಶ್ನೆ ಏನೆಂದರೆ, ಬೆಂಗಳೂರು ನಗರದಲ್ಲಿ liquor shop ಗಳು ಯಾವ ಸಮಯದಿಂದ ಯಾವ ಸಮಯದವರೆಗೆ ತೆರೆದಿರುತ್ತವೆ ಎಂದು ಅವರು

ಕೇಳಿದ್ದಾರೆ. ಅದರಿಂದ ಜನರಿಗೆ ತೊಂದರೆಯಾಗುತ್ತದೆ ಎನ್ನುವ ಭಾವನೆಯಿಂದ ಆ ಪ್ರಶ್ನೆ ಕೇಳಿದ್ದಾರೆ. ಮಂತ್ರಿಗಳು ಉತ್ತರ ಕೊಡತಕ್ಕಂಥದ್ದು, ಸಮಜಾಯಿಷಿ, ನಾನು ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಹೇಳಬಹುದು. ಆದರೆ, ನಮ್ಮ objection ಏನಿದೆ ಎಂದರೆ, liquor shop ಎನ್ನತಕ್ಕಂಥದ್ದು ಇದೆಯಲ್ಲ, ಇದಕ್ಕೆ ಇವರು wine shop ಎಂದು ಹೆಸರಿಡುವುದಕ್ಕೆ ಹೋಗುತ್ತಿದ್ದಾರೆ. ನಾವೆಲ್ಲ ದ್ರಾಕ್ಷಿ ಬೆಳೆಯುವವರು. ದ್ರಾಕ್ಷಿ ಹಣ್ಣಿನಿಂದ ತಯಾರಗತಕ್ಕಂಥದ್ದು ವೈನ್. Liquor shop ಗಳಿಗೆ wine shop ಗಳೆಂದು ಹೆಸರಿಡುತ್ತಿದ್ದಾರೆ. ಜನರಲ್ಲಿ ಏನು ಅಭಿಪ್ರಾಯ ಬರುತ್ತಿದೆ ಎಂದರೆ, ಇದು liquor ಇರತಕ್ಕಂಥದ್ದು, spirit ಇರತಕ್ಕಂಥದ್ದು ಎನ್ನುವ ಭಾವನೆ ಬಂದು, ಇವತ್ತು ನಮ್ಮ wine ಅನ್ನು ಯಾರು ಕುಡಿಯಲಿಕ್ಕೆ ತಯಾರಿಲ್ಲ. ಅದಕ್ಕೆ ದಯಮಾಡಿ, ನಾನು ನಿಮ್ಮ ಮುಖಾಂತರ ಮಾನ್ಯ ಸಚಿವರಿಗೆ ವಿನಂತಿ ಮಾಡಿಕೊಳ್ಳುತ್ತೇನೆ, ಆ ಇಲಾಖೆಯವರಿಗೆ ಹೇಳಬೇಕು. Liquor shop ಬೇರೆ, Wine shop ಬೇರೆ.

ಶ್ರೀ ಬಸವರಾಜ ರಾಯರೆಡ್ಡಿ: Wine ನಲ್ಲಿ highest spirit ಇರುತ್ತದೆ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ: ನಮ್ಮ ದೇಶದಲ್ಲಿ ದ್ರಾಕ್ಷಿ ಹಣ್ಣಿನಿಂದ ಮಾತ್ರ ಪ್ರಾರಂಭವಾಗುವುದು.

ಶ್ರೀ ಬಸವರಾಜ ರಾಯರೆಡ್ಡಿ: Wine ನಲ್ಲಿ 48% highest spirit ಇರುತ್ತದೆ. Brandy ಯಲ್ಲಿ spirit ಕಡಿಮೆ ಇರುತ್ತದೆ. Wine is the highest spirit.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ: ಅವರು ದ್ರಾಕ್ಷಿಯನ್ನೂ ಬೆಳೆದಿಲ್ಲ. Wine ಮಾಡಿದ್ದರೋ ಗೊತ್ತಿಲ್ಲ. ಸುಮ್ಮನೆ ಅವರು ಬೆಂಗಳೂರಿನಲ್ಲಿ ಅಡ್ಡಾಡುತ್ತಿರುತ್ತಾರೆ. ಸುಮ್ಮನೆ ರೈತರು ಎಂದು ಹೇಳಿಕೊಂಡು ತಿರುಗಾಡುತ್ತಾರೆ. ಅದು ಬೇರೆ.

(ಗೊಂದಲ)

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ: ಆದರೆ, ನಮ್ಮದು ಇದಕ್ಕೆ ನೇರವಾಗಿರತಕ್ಕಂಥ objection ಎಂದರೆ, ಆ ಹೆಸರನ್ನು ನೇರವಾಗಿ ಬದಲಾಯಿಸಬೇಕು. ಆ ಕೆಲಸ ಮಾಡಬೇಕು.

ಉಪಾಧ್ಯಕ್ಷರು: ಅದು ಸಿಟಿಗೆ ಸಂಬಂಧಿಸಿರುವುದು.

ಶ್ರೀ ಸಿ.ಎನ್. ಬಾಲಕೃಷ್ಣ: ನಮ್ಮ ಕ್ಷೇತ್ರದಲ್ಲಿ Wine store ಪಕ್ಕದಲ್ಲಿಯೇ ನಮ್ಮ ಸ್ನೇಹಿತರದ್ದು ಒಂದು ಕಾಫಿ, ಟೀ ಅಂಗಡಿ ಇದೆ. ಇವತ್ತು ವ್ಯಾಪಾರ ಚೆನ್ನಾಗಿ ಆಗಿದೆಯೇ ಎಂದು ಒಂದು ದಿವಸ ಕೇಳಿದೆ. ಸಾರ್, ಪಕ್ಕದಲ್ಲಿ wine store ಇದೆ, ಅವನು ಏನಾದರೂ 8 ಗಂಟೆಗೆ ತೆರೆದರೆ ವ್ಯಾಪಾರವಾಗುವುದಿಲ್ಲ. 10 ಗಂಟೆಗೆ ತೆರೆದರೆ ಪರವಾಗಿಲ್ಲ ಸ್ವಲ್ಪ ವ್ಯಾಪಾರವಾಗುತ್ತದೆ ಎಂದು ಹೇಳಿದರು. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಇದ್ದಾರೆ, ಶಿಸ್ತುಬದ್ಧವಾಗಿ 11 ಗಂಟೆ, 12 ಗಂಟೆಗೋ ತೆರೆಯುವುದಕ್ಕೆ ಅವಕಾಶ ಮಾಡಿಕೊಡಬೇಕು. ಯಾರು early ತೆರೆಯುತ್ತಾರೆ ಅವರ license ರದ್ದು ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ವಿನಂತಿ ಮಾಡುತ್ತೇನೆ.

ಉಪಾಧ್ಯಕ್ಷರು: ನೀವು ಮಾತನಾಡಿ.

ಶ್ರೀ ಎಸ್. ಸುರೇಶ್‌ಕುಮಾರ್: ಇದಕ್ಕೆ ಪೂರಕವಾಗಿ ಹೇಳುತ್ತೇನೆ, ಅದಕ್ಕಿಂತಲೂ ಮೂಲಭೂತವಾದುದ್ದು, wine stores ನಲ್ಲಿ loose ಮದ್ಯ ಮಾರುವ ಹಾಗೇ ಇಲ್ಲ. ಪ್ರತಿ liquor shop ನಲ್ಲಿ ಪಕ್ಕದಲ್ಲಿ ಒಂದು ಪರದೆ ಹಾಕುತ್ತಾರೆ. ಆ ಪರದೆ ಒಳಗಡೆ ಹೋಗುವುದು, ಬರುವುದು ಇದು ಆಗುತ್ತಿದೆ. ಅಬಕಾರಿ ಇಲಾಖೆಗೆ ಕಣ್ಣಿಲ್ಲವೇ?

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ: ಸುರೇಶ್‌ಕುಮಾರ್‌ರವರು ಯಾವಾಗ ಆ ಪರದೆಯೊಳಗೆ ಹೋದರು?

(ಗೊಂದಲ)

ಉಪಾಧ್ಯಕ್ಷರು: ಆಯಿತು, ಕುಳಿತುಕೊಳ್ಳಿ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಇಡೀ ಜೀವಮಾನದಲ್ಲಿ ನೀವು ಒಂದು drop liquor ಕುಡಿಯಲಿಲ್ಲ. ಅವರು bottle ಮುಟ್ಟಲಿಲ್ಲ. ನೀವು ಪ್ರಶ್ನೆ ಕೇಳುವುದು, ಅವರು ಉತ್ತರ ಹೇಳುವುದು, both of you are ineligible to raise this very issue. ಸವದಿಯವರೆ, ನೀವು ಮಾತನಾಡಿ. ನಿಮಗೆ ಅರ್ಹತೆ ಇದೆ.

ಶ್ರೀ ಎಸ್. ಸುರೇಶ್‌ಕುಮಾರ್: ನಾನು ಒಪ್ಪಕೊಳ್ಳುತ್ತೇನೆ. We are eligible to safeguard the interest of our citizens. ಅದಕ್ಕೋಸ್ಕರ ದಯವಿಟ್ಟು ಆ ಅಬಕಾರಿ ಇಲಾಖೆಗೆ ಸೂಚನೆ ಕೊಡಿ. ಇಲ್ಲದೇ ಇದ್ದರೆ, ಕಣ್ಣು test ಮಾಡಿಸಿ ಕನ್ನಡಕ ಕೊಡಿ. Wine stores ಅಥವಾ liquor shop ನಲ್ಲಿ loose ಯಾರ್ಯಾರು ಮಾರುತ್ತಿದ್ದಾರೆ, ಕೂಡಲೇ ಅವರ ಪರವಾನಿಗೆ ರದ್ದುಮಾಡಿಸಿ. ಬೆಳಗ್ಗೆ 6 ಗಂಟೆಗೆ ಮಾರುವುದು ದಯವಿಟ್ಟು ಆಗದ ಹಾಗೆ ನೋಡಿಕೊಳ್ಳಿ.

ಉಪಾಧ್ಯಕ್ಷರು: ಸಾಕು ಬಿಡಿ. ಸಾಕಷ್ಟು ಚರ್ಚೆಯಾಗಿದೆ.

(ಗೊಂದಲ)

ಶ್ರೀ ಕೆ. ಶಿವಮೂರ್ತಿ: ಸಾರ್, ನಮಗೂ ಮಾತನಾಡುವುದಕ್ಕೆ ಅವಕಾಶ ಕೊಡಿ.

ಉಪಾಧ್ಯಕ್ಷರು: ಇದು ಸಿಟಿಯ ವಿಚಾರ.

ಶ್ರೀ ಬಿ.ಆರ್. ಪಾಟೀಲ್: ಇದು ಗಂಭೀರ ಸಮಸ್ಯೆ.

ಉಪಾಧ್ಯಕ್ಷರು: ನೀವು ಹಳ್ಳಿಗಳದ್ದೆಲ್ಲ ತಂದರೆ ಹೇಗೆ?

(ಗೊಂದಲ)

ಉಪಾಧ್ಯಕ್ಷರು: ಯಾವುದಕ್ಕೆ. . .

(ಗೊಂದಲ)

ಉಪಾಧ್ಯಕ್ಷರು: ನೀವು ಕುಳಿತುಕೊಳ್ಳಿ.

ಶ್ರೀ ಕೆ. ಶಿವಮೂರ್ತಿ: ಸಾರಾಯಿ ಕುಡಿಯದಿದ್ದವರು ಸಾರಾಯಿ ಬಗ್ಗೆ ವ್ಯಾಖ್ಯಾನ ಮಾಡುತ್ತಾರೆ.

ಉಪಾಧ್ಯಕ್ಷರು: ಇದು ಎಲ್ಲೆಲ್ಲಿಗೋ ಹೋಗುತ್ತಿದೆ. ನೀವು ಮಾತನಾಡಿ. ಬಿ.ಆರ್. ಪಾಟೀಲರೆ, ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಹೆಚ್.ಕೆ. ಪಾಟೀಲ್: ಗೌರವಾನ್ವಿತ ಸದಸ್ಯರು ಗಂಭೀರವಾದ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ.

ಉಪಾಧ್ಯಕ್ಷರು: ಇಲ್ಲ, ಬೇಡ, ಕುಳಿತುಕೊಳ್ಳಿ.

ಶ್ರೀ ಬಿ.ಆರ್. ಪಾಟೀಲ್: ಎಲ್ಲಿ losse sale ಕಡಿಮೆಯಾಗಿದೆ ಅಲ್ಲಿ Excise Department ನವರು notice ಕೊಟ್ಟಿದ್ದಾರೆ.

ಉಪಾಧ್ಯಕ್ಷರು: ಅದನ್ನೇ ಉತ್ತರ ಕೊಡುತ್ತಾರೆ. ಕುಳಿತುಕೊಳ್ಳಿ.

ಶ್ರೀ ಹೆಚ್.ಕೆ. ಪಾಟೀಲ್ (ಮಾನ್ಯ ಅಬಕಾರಿ ಸಚಿವರ ಪರವಾಗಿ): ಸನ್ಮಾನ್ಯ ಸುರೇಶ್‌ಕುಮಾರ್‌ರವರು, ಸನ್ಮಾನ್ಯ ಶ್ರೀನಿವಾಸಮೂರ್ತಿಯವರು ಕೆಲವು ಗಂಭೀರ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ನಿಯಮಗಳನ್ನು ಉಲ್ಲಂಘನೆ ಮಾಡಿ liquor shop ಮಾಲೀಕರು ಅಂಗಡಿಗಳನ್ನು ತೆರೆಯುತ್ತಾರೆ ಹಾಗೂ ಅಲ್ಲಿ loose ಸಾರಾಯಿಯನ್ನು ಮಾರಾಟ ಮಾಡುತ್ತಾರೆನ್ನುವಂಥ ಮಾತನ್ನು ಹೇಳಿದ್ದಾರೆ. ಈ ಎಲ್ಲಾ liquor shop ಗಳು ನಿಯಮಗಳಂತೆ ನಡೆಯಬೇಕು. ಆ ನಿಯಮಗಳ ಪಾಲನೆ ಆಗದೇ ಹೋದರೆ, ಸಂಬಂಧಪಟ್ಟಿರತಕ್ಕಂಥ ಅಧಿಕಾರಿಗಳು ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಆ ಕ್ರಮ ತೆಗೆದುಕೊಳ್ಳದೇ ಹೋದರೆ ಸರ್ಕಾರ ಅಂಥ ಅಧಿಕಾರಿಗಳ ಮೇಲೆ ಸಹ ಗಂಭೀರವಾಗಿರತಕ್ಕಂಥ ಹೆಜ್ಜೆಯನ್ನಿಡುತ್ತದೆ ಎನ್ನುವಂಥ ಎಚ್ಚರಿಕೆಯನ್ನು ಈ ಸಂದರ್ಭದಲ್ಲಿ ಕೊಡುತ್ತೇನೆ.

(ಗೊಂದಲ)

ಉಪಾಧ್ಯಕ್ಷರು: ಈಗ ಮುಂದಿನ ಪ್ರಶ್ನೆ.

(ಗೊಂದಲ)

ಉಪಾಧ್ಯಕ್ಷರು: ಕುಳಿತುಕೊಳ್ಳಿ. ಚರ್ಚೆಗೆ ಅವಕಾಶವಿಲ್ಲ.

(ಗೊಂದಲ)

ಉಪಾಧ್ಯಕ್ಷರು: ಶ್ರೀಮತಿ ಶಕುಂತಲಾ ಶೆಟ್ಟಿ.

ಪ್ರಶ್ನೆ ಸಂ.103(1670)

(ಮಾನ್ಯ ಸದಸ್ಯರಾದ ಶ್ರೀಮತಿ ಶಕುಂತಲಾ ಟಿ. ಶೆಟ್ಟಿಯವರು ಸದನದಲ್ಲಿ ಹಾಜರಿರಲಿಲ್ಲ)

ಉಪಾಧ್ಯಕ್ಷರು: ಗೋಪಾಲ ಪೂಜಾರಿಯವರೆ ಮಾತನಾಡಿ.

(ಗೊಂದಲ)

ಉಪಾಧ್ಯಕ್ಷರು: ನೀವು generally ಎಲ್ಲರೂ ಕೇಳಿದರೆ ಅವರು ಹೇಗೆ ಉತ್ತರ ಕೊಡುತ್ತಾರೆ?

ಶ್ರೀ ಹೆಚ್.ಸಿ. ಬಾಲಕೃಷ್ಣ: ಉತ್ತರ ಹೇಳಿದ್ದಾರೆ. ಅವರು specific ಆಗಿ ಕೇಳಿದ್ದಾರೆ, ಅವರಿಗೆ ಉತ್ತರ ಹೇಳಲಿ.

ಉಪಾಧ್ಯಕ್ಷರು: ಅವರತು ಹೇಳಿದ್ದಾರೆ. ಉತ್ತರ ಹೇಳಿದ್ದಾರೆ.

ಶ್ರೀ ಹೆಚ್.ಸಿ. ಬಾಲಕೃಷ್ಣ: ಈಗ ಅವರು ಆಗಿರುವುದಕ್ಕೇನಾದರೂ ಒಂದು ಹೇಳಲಿ.